ಆರ್ಥಿಕ ಇಲಾಖೆ ಹಾಗೂ ಯೋಜನಾ ಇಲಾಖೆಗಳನ್ನು ಸಂಪರ್ಕಿಸಿ ಮಾಹಿತಿಗಳನ್ನು ಪಡೆಯಲಾಗುತ್ತಿದೆ. ಈ ಮಾಹಿತಿಗಳು ಲಭ್ಯವಾದ ನಂತರ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.

ಅ) ವಿಷಯ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆಯಾದ್ದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಧಾರವಾಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಸಹಕಾರ ಸಂಘಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 883 (1147)

ಶ್ರೀ ಡಿ. ಆರ್. ಪಾಟೀಲ್ (ಗದಗ್) :- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಆಡಳಿತಾಧಿಕಾರಿಗಳ ನಿರ್ವಹಣೆಯಲ್ಲಿರುವ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿಷ್ಟು? ಅವುಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಕಾರಣ ಗಳೇನು (ತಾಲ್ಲೂಕುವಾರು ವಿವರ ನೀಡುವುದು)

ಆ) ಇವುಗಳಲ್ಲಿ ಮುಂಗಾರು ಕಾಲದಲ್ಲಿ ಧಾರವಾಡ ಜಿಲ್ಲೆಯಲ್ಲಿ ಪತ್ತು ಮಂಜೂರಿ ಮಾಡಿ ಹಣ ಬಿಡುಗಡೆ ಮಾಡದಿರುವ ಸಂಘಗಳು ಎಷ್ಟು?

ಇ) ತಮ್ಮ ಈ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲರಾದ ಸಂಘಗಳ ಆಡಳಿತಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ? ವಿವರ ನೀಡುವುದು.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) :-

ಅ) ಧಾರವಾಡ ಜಿಲ್ಲೆಯಲ್ಲಿ ಆಡಳಿತಾಧಿಕಾರಿ ನಿರ್ವಹಣೆಯಲ್ಲಿ ಎರಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಿವೆ.

ಕ್ರಮ ಸಂಖ್ಯೆ	ತಾಲ್ಲೂಕು	ಕಲಂ 30(1) ರಲ್ಲಿ ಆಡಳಿತಾಧಿಕಾರಿಗಳ ನಿರ್ವಹಣೆಯಲ್ಲಿರುವ ಸಂಘಗಳು
1.	ಧಾರವಾಡ	-
2.	ಹುಬ್ಬಳ್ಳಿ	-
3.	ಕಲಘಟಗಿ	1

4.	ಕುಂದಗೋಳ	1
5.	ಹಾವೇರಿ	-
6.	ರಾಣೆಬೆನ್ನೂರು	-
7.	ಬ್ಯಾಡಗಿ	-
8.	ಹಿರೇಕೆರೂರು	-
9.	ಹಾನಗಲ್	-
10.	ಗದಗ	-
11.	ಮುಡರಗಿ	-
12.	ರೋಣ	-
13.	ನವಲಗುಂದ	-
14.	ಸವಣೂರು	-
15.	ಶಿಗ್ಗಾಂವ	-
16.	ಶಿರಹಟ್ಟಿ	-
17.	ನರಗುಂದ	-
	ಒಟ್ಟು	2

ಈ ಜಿಲ್ಲೆಯಲ್ಲಿ 2 ಸಹಕಾರ ಸಂಘಗಳ ಆಡಳಿತ ಮಂಡಳಿಯವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಹಾಗೂ ಸಂಘದ ಪೋಟ ನಿಯಮಗಳ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಮತ್ತು ಸಾಲವನ್ನು ಸರಿಯಾಗಿ ವಸೂಲಿ ಮಾಡದೆ ಇರುವುದರಿಂದ ಸದರಿ ಎರಡು ಸಂಘಗಳ ಆಡಳಿತ ಮಂಡಳಿಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ಕಲಂ 30 (1) ರನ್ವಯ ರದ್ದುಪಡಿಸಿ ಜಿಲ್ಲಾ ಉಪ ನಿಬಂಧಕರು ಆಡಳಿತಾಧಿಕಾರಿಗಳನ್ನು ನೇಮಿಸಿದ್ದಾರೆ.

ಅ) ಅಂತಹ ಸಹಕಾರ ಸಂಘಗಳು ಯಾವುದೂ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ :- ಗದಗ್ ತಾಲ್ಲೂಕು ಹೊಂಬಳ ಗ್ರಾಮಕ್ಕೆ ಬಸ್ ವಿಲ್ಲಾಣ.

ಬುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 884(1146)

ಶ್ರೀ ಡಿ. ಆರ್. ಪಾಟೀಲ್ (ಗದಗ್) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?